ಹೇಳಲಿ. ಅವರು ಏನಾದರೂ ಒಪ್ಪಂದ ಮಾಡಿಕೊಂಡಿದ್ದೇವೆ ಎಂದರೆ ಅದರ ಬಗ್ಗೆ ನೇರವಾಗಿ ಉತ್ತರ ಅವರು ಕೊಡಬೇಕಾಗುತ್ತದೆ. ಇದರ ಬಗ್ಗೆ ನಮ್ಮ ಸಂಪೂರ್ಣ ವಿರೋಧ ಇದೆ. ಕೊಚೆಂಟ್ರಿಕ್ಸ್ ಬಗ್ಗೆ ಎಂ.ಯು.ಓ ಮತ್ತು ಪಿ.ಪಿ.ಐ...

ಶ್ರೀ ಜೆ.ಹೆಚ್. ಪಟೇಲ್ : ಮಾನ್ಯ ವಿರೋಧಪಕ್ಷದ ನಾಯಕರೇ ಹೇಳಿದ ಹಾಗೆ ಇದು ಒಪ್ಪಂದ ಆಗಿ ಫೈನಲ್ ಆಗಿಲ್ಲ. ವಿಚಾರ ಮಾಡುತ್ತಿದ್ದೇವೆ. ನಾನು ಇದನ್ನು ಉದಾಹರಣೆಯಾಗಿ ಹೇಳಿದ್ದುದು.

ಬೆಂಗಳೂರು ಡೈರಿಯ ಹಾಲಿನ ದರದ ಪರಿಷ್ಕರಣೆ

167 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಬೆಂಗಳೂರು ಡೈರಿಯ ಹಾಲಿನ ದರವನ್ನು ಇತ್ತೀಚೆಗೆ ಪರಿಷ್ಕರಿಸಲಾಗಿದೆಯೇ?

ಆ) ಹಾಲಿನ ದರವನ್ನು ಏರಿಸಲು ಇದ್ದಂತಹ ಕಾರಣಗಳೇನು?

ಇ) ಹಾಲಿನ ದರವನ್ನು ಪರಿಷ್ಕರಿಸುವುದಕ್ಕಾಗಿ ಒಂದು ಸಮಿತಿಯನ್ನು ಸರ್ಕಾರದವರು ರಚಿಸಿದ್ದರೆ;

ಹಾಗಿದ್ದಲ್ಲಿ ಆ ಸಮಿತಿಯು ಮಾಡಿದ ಶಿಫಾರಸ್ಸುಗಳೇನು;

ಈ) ಈ ಹಾಲಿನ ದರವನ್ನು ಏರಿಸಿರುವ ಬಗ್ಗೆ ಬೆಂಗಳೂರು ನಗರದಲ್ಲಿ ಜನತೆಯ ಪ್ರತಿಭಟನೆ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಹಾಗಿದ್ದಲ್ಲಿ ಏರಿಸಿರುವ ಹಾಲಿನ ದರವನ್ನು ಕಡಿಮೆ ಮಾಡಲು ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು):

ಅ) ಹೌದು.

ದಿನಾಂಕ: 1-6-1995 ರಿಂದ ಗ್ರಾಹಕರಿಗೆ ಪ್ರತಿ ಲೀಟರ್‌ಗೆ ರೂ. 8-50 ರಂತೆ.

ಆ) 1) ವಿದ್ಯುಚ್ಛಕ್ತಿ, ಇಂಧನ, ಪ್ಯಾಕಿಂಗ್ ಸಾಗಾಣಿಕೆ ವೆಚ್ಚ, ಪಶು ಆಹಾರ ಮತ್ತು ಇತರೇ ಅಗತ್ಯ ವಸ್ತುಗಳ ಹಾಗೂ ಹಾಲು ಸಂಸ್ಕರಣೆ ವೆಚ್ಚದಲ್ಲಿ ಗಣನೀಯ ಹೆಚ್ಚಳ.

2) ಹಾಲು ಉತ್ಪಾದನಾ ವೆಚ್ಚದ ಹೆಚ್ಚಳದಿಂದಾಗಿ ಹಾಲು ಉತ್ಪಾದನೆ ಮತ್ತು ಶೇಖರಣೆ ಇಳಿಮುಖವಾಗುತ್ತಿದ್ದುದರಿಂದ ಹಾಲು ಉತ್ಪಾದಕರಿಗೆ ಪ್ರೋತ್ಸಾಹದಾಯಕ ಬೆಲೆ ನೀಡಲು.

ಇ) ಹೌದು.

1) ಶೇಕಡ 3.5 ಜಿಡ್ಡು ಮತ್ತು ಶೇಕಡ 8.5 ಜಿಡ್ಡೇತರ ಘನ ಪದಾರ್ಥವುಳ್ಳ ಪ್ರತಿ ಲೀಟರ್ ಹಾಲು ಶೇಖರಣೆಗೆ ರೂ. 6.50 ದರ ನೀಡುವುದು.

2) ಶೇಕಡ 3.0 ಜಿಡ್ಡು ಮತ್ತು ಶೇಕಡ 8.5 ಜಿಡ್ಡೇತರ ಘನ ಪದಾರ್ಥವುಳ್ಳ ಹಾಲು ಮಾರಾಟ ದರವನ್ನು ಪ್ರತಿ ಲೀಟರ್‌ಗೆ ರೂ. 8.50 ನಿಗಧಿಪಡಿಸುವುದು.

ಈ) ಹೌದು

ಅಗತ್ಯ ವಸ್ತುಗಳ ಬೆಲೆಯಲ್ಲಿ ಆದ ಹೆಚ್ಚಳಕ್ಕನುಗುಣವಾಗಿ ದರವನ್ನು ಪರಿಷ್ಕರಿಸಿರುವುದರಿಂದ ದರ ಇಳಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ರಾಮಲಿಂಗಾರೆಡ್ಡಿ : ಮಾನ್ಯ ಅಧ್ಯಕ್ಷರೇ, ಹಾಲಿನ ಬೆಲೆ ಏರಿಕೆ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಅದರಲ್ಲಿ ದಿನಾಂಕ 1-6-95 ರಿಂದ

ಹಾಲಿನ ದರ 8-50 ರೂಪಾಯಿ ಏರಿಸಿದ್ದೇವೆಂದು ಹೇಳಿದ್ದಾರೆ. ಅವರು ಅದಕ್ಕೆ ಎರಡು ಕಾರಣಗಳನ್ನು ಕೊಟ್ಟಿದ್ದಾರೆ. ಒಂದು ವಿದ್ಯುಚ್ಛಕ್ತಿ ಇಂಧನ ಪ್ಯಾಕಿಂಗ್ ಸಾಗಾಣಿಕೆ ವೆಚ್ಚ ಪಶು ಆಹಾರ ಮತ್ತು ಇತರೇ ಅಗತ್ಯ ವಸ್ತುಗಳು ಹಾಗೂ ಹಾಲು ಸಂಸ್ಕರಣೆ ವೆಚ್ಚದಲ್ಲಿ ಗಣನೀಯ ಹೆಚ್ಚಳ. ಎರಡನೇಯದು ಹಾಲು ಉತ್ಪಾದನಾ ವೆಚ್ಚದ ಹೆಚ್ಚಳದಿಂದಾಗಿ ಹಾಲು ಉತ್ಪಾದನೆ ಮತ್ತು ಶೇಖರಣೆ ಇಳಿಮುಖವಾಗುತ್ತಿರುವುದರಿಂದ ಹಾಲು ಉತ್ಪಾದಕರಿಗೆ ಪ್ರೋತ್ಸಾಹದಾಯಕ ಬೆಲೆ ನೀಡಲು ಎಂದು ಕೊಟ್ಟಿದ್ದಾರೆ. ನೀವು ರೈತರಿಗೆ ಏನು 6-50 ರೂಪಾಯಿ ಕೊಡುತ್ತಿದ್ದೀರೋ ಕೊಡಿ. ಇನ್ನೂ ಜಾಸ್ತಿ ಕೊಟ್ಟರೂ ನಮ್ಮದು ಯಾರದೂ ತಕರಾರು ಇಲ್ಲ. ಆದರೆ, ಮೊದಲನೆಯದಾಗಿ ಕಾರಣ ಏನು ಕೊಟ್ಟಿದ್ದೀರಿ ವಿದ್ಯುಚ್ಛಕ್ತಿ ಇಂಧನ ಪ್ಯಾಕಿಂಗ್ ಸಾಗಾಣಿಕೆ ವೆಚ್ಚ ಪಶು ಆಹಾರ ಮತ್ತು ಇತರೇ ಅಗತ್ಯ ವಸ್ತುಗಳ ಹಾಗೂ ಹಾಲು ಸಂಸ್ಕರಣೆ ವೆಚ್ಚದಲ್ಲಿ ಗಣನೀಯ ಹೆಚ್ಚಳ ಎಂದು ಕೊಟ್ಟಿದ್ದೀರಿ ಇದನ್ನು ನಾನು ಒಪ್ಪುವುದಿಲ್ಲ. ನೀವು ಗ್ರಾಹಕರಿಂದ ತೆಗೆದುಕೊಳ್ಳುತ್ತಿರುವುದು 8-50 ರೂಪಾಯಿ. ರೈತರಿಗೆ ನೀವು ಕೊಟ್ಟಿರುವುದು 6Ë50 ರೂಪಾಯಿ. ಒಂದು ಲೀಟರ್ ಗೆ ಎರಡು ರೂಪಾಯಿ ನೀವು ಸಿಬ್ಬಂದಿ ವೆಚ್ಚ ಎಂದು ತೋರಿಸುತ್ತೀದ್ದೀರಿ. ಇದು ಹೆಚ್ಚು ಎಂದು ನನ್ನ ಗಮನಕ್ಕೆ ಬಂದಿದೆ.

ಮಿಲ್ಕ್ ಡೈರಿಯವರು ದಕ್ಷತೆಯಿಂದ ಮತ್ತು ಸಮರ್ಪಕವಾಗಿ ಕೆಲಸ ಮಾಡಿದರೆ ಎಸ್ಟಾಬಿಲಿಷ್ ಮೆಂಟ್ ಚಾರ್ಜಸ್ನು ಕಡಿಮೆ ಮಾಡಿ ಇನ್ನೂ ಕಡಿಮೆ ಬೆಲೆಗೆ ಹಾಲನ್ನು ಕೊಡಬಹುದೆಂದು ನನ್ನ ಮನವಿ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, 1992 ರಲ್ಲಿ ಹಾಲು ಉತ್ಪಾದಕರಿಗೆ ಬೆಲೆಯಲ್ಲಿ ಹೆಚ್ಚಳ ಮಾಡಿದ ನಂತರ 1995ರಲ್ಲಿ ಹಾಲು ಉತ್ಪಾದಕರ ಮತ್ತು ಗ್ರಾಹಕರ ಹಿತದೃಷ್ಟಿಯಿಂದ ಒಂದು ತಜ್ಞರ ಸಮಿತಿ ಮಾಡಿ ಅದರ ವರದಿ ಪ್ರಕಾರ ಒಂದು ಲೀಟರ್ ಹಾಲಿಗೆ ಒಂದು ರೂಪಾಯಿಯನ್ನು ಹೆಚ್ಚಳ ಮಾಡಿ ಅದರಲ್ಲಿ 82 ಪೈಸೆಯಷ್ಟು ಸಂಸ್ಕರಣ ಮತ್ತು ವಿತರಣೆಗೆ ಖರ್ಚು ಮಾಡಲಾಗುತ್ತದೆ. ಇಡೀ ರಾಷ್ಟ್ರದಲ್ಲಿ ಅತೀ ಕಡಿಮೆ ಖರ್ಚಿನಲ್ಲಿ ಅಂದರೆ ಒಂದು ಲೀಟರ್ಗೆ 2 ರೂಪಾಯಿಯನ್ನು ಹಾಲು ಒಕ್ಕೂಟವು ಖರ್ಚು ಮಾಡಲಾಗುತ್ತಿದೆ. ದಿನಾಂಕ: 1-6-95 ರಿಂದ ದರವನ್ನು ಹೆಚ್ಚಳ ಮಾಡಿ ಒಂದು ಲೀಟರ್ಗೆ ಎಂಟೂವರೆ ರೂಪಾಯಿಯಂತೆ ಹಾಲನ್ನು ಮಾರಾಟ ಮಾಡಲಾಗುತ್ತಿದೆ. ಇದರ ಬಗ್ಗೆ ಅಲ್ಲಿ ಇಲ್ಲಿ ಪ್ರತಿಭಟನೆ ಮಾಡಿದ್ದಾರೆಂದು ಮಾನ್ಯ ಸದಸ್ಯರಾದ ರಾಮಲಿಂಗಾರೆಡ್ಡಿಯವರು ಕೇಳಿದ್ದಾರೆ. ಅಲ್ಲಲ್ಲಿ ಅಲ್ಪಸ್ವಲ್ಪ ರಾಜಕೀಯ ಲಾಭಕ್ಕಾಗಿ ಕೆಲವರು ಪ್ರತಿಭಟನೆ ಮಾಡಿದ್ದಾರೆ. ಆದರೆ people have accepted moraly ಎಂದು ನಾನು ಅಂದುಕೊಳ್ಳುತ್ತೇನೆ. ಹಾಲು ಉತ್ಪಾದನೆ ಮಾಡತಕ್ಕಂಥ ರೈತರ ಕಷ್ಟವನ್ನು ನೋಡಿ ಬೆಲೆ ಹೆಚ್ಚಳವನ್ನು ಜನರು ಒಪ್ಪಿಕೊಂಡಿದ್ದಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಮುಖ್ಯಮಂತ್ರಿಗಳು ಬಹಳ ಬುದ್ಧಿವಂತರಿದ್ದಾರೆ. ಬೇರೆಯವರು ಯಾರಾದರೂ ಆಗಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳುತ್ತಿದ್ದೆವು. ಅವರು ಅದಕ್ಕೆ ಸಂದಿಯಲ್ಲಿ ಏಕೆ ಸೇರಿಸಿದರು ಅಂದರೆ ನಾವು ಕೊಜೆಂಟ್ರಿಕ್ಸ್ ಸಂಸ್ಥೆಯೊಂದಿಗೆ ಒಂದು ಸಾವಿರ ಮೆಗಾವಾಟ್ಸ್ ಉತ್ಪಾದನೆ ಮಾಡಲು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ರಾಜಕಾಯ ಲಾಭಕ್ಕಾಗಿ ಎಜಿಟೇಷನ್ ಮಾಡುತ್ತಿದ್ದಾರೆಂದು ಹೇಳುವುದ ಸರಿಯಲ್ಲ. ರೈತರ ಅನುಕೂಲಕ್ಕಾಗಿ ಒಂದು ರೂಪಾಯಿಯನ್ನು ಹೆಚ್ಚಳ ಮಾಡಿದ್ದೇವೆಂದು ತಾವು ಬೇಕಾದರೆ ಸಮರ್ಥಿಸಿಕೊಳ್ಳಿ. ಒಂದೇ ಕಡೆ ರೈತರು ಹೆಚ್ಚಳ ಮತ್ತೊಂದು ಕಡೆ ಕನ್ಸ್ಯೂವರ್ಸ್ ಇದ್ದಾರೆ. ಈ ಕನ್ಸ್ಯೂವರ್ಸ್ ಬಗ್ಗೆ ತಾವು ಏನು ಹೇಳುತ್ತೀರಿ? ಇದರ ಬಗ್ಗೆ ಪ್ರತಿಬಟನೆ

ಮಾಡಿದಾಗ, ಪ್ರತಿಯೊಂದೂ ರಾಜಕೀಯವಾಗಿ ಪ್ರತಿಬಿಟಿಸಿ ಮಾಡುತ್ತಾರೆಂದು ತಾವು ಹೇಳುವುದಾದರೆ ನಾವು ನಿಜಕ್ಕೂ ಅದನ್ನು ಖಂಡಿಸಬೇಕಾಗುತ್ತದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಇಡೀ ರಾಷ್ಟ್ರದಲ್ಲಿ ಹೋಲಿಕೆ ಮಾಡಿದರೆ ನಮ್ಮ ರಾಜ್ಯದಲ್ಲಿ ಹಾಲಿನ ಬೆಲೆ ಕಡಿಮೆ ಇದೆ. ದೆಹಲಿಯಲ್ಲಿ ಒಂದು ಲೀಟರ್ ಹಾಲಿಗೆ 9 ರೂಪಾಯಿಂದ 14 ರೂಪಾಯಿಯವರೆಗೆ ಮಾರಾಟ ಮಾಡಲಾಗುತ್ತಿದೆ.

ಅಧ್ಯಕ್ಷರು : ರಾಜಕೀಯ ಲಾಬಕ್ಕಾಗಿ ಪ್ರತಿ ಭಟನೆ ಮಾಡುತ್ತಾರೆಂದು ತಾವು ಅವರಿಗೆ ಹೇಳಿದಿರಾ?

ಶ್ರೀ ಬಿ.ಎನ್. ಬಚ್ಚೇಗೌಡ : ನಾನು ಅವರಿಗೆ ಹೇಳಲಿಲ್ಲ ಸ್ವಾಮಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇದರಿಂದ ರಾಜಕೀಯ ಲಾಭ ಎಂದು ಹೇಳುವ ಪ್ರಶ್ನೆ ಬೇರೆ. ರೈತರಿಗೆ ಅನುಕೂಲ ಮಾಡಬೇಕೆನ್ನುವ ಉದ್ದೇಶ ಸರ್ಕಾರಕ್ಕಿದ್ದಿದ್ದರೆ, ಹಾಲಿನ ಬೆಲೆ ಹೆಚ್ಚಳವನ್ನು ಮಾಡದೆ ಸರ್ಕಾರವೇ——ಹೆಚ್ಚುವರಿ ಹಣವನ್ನು ಕೊಡಬಹುದಾಗಿತ್ತು. ಈಗ ಹಾಲಿನ ಬೆಲೆಯನ್ನು ಜಾಸ್ತಿ ಮಾಡಿ ಜನರಿಗೆ ತೊಂದರೆಯಾಗಿರುವುದರಿಂದ ಇದನ್ನು ನಾವು ಖಂಡಿಸಬೇಕಾಗುತ್ತದೆ. ಇದು ಪ್ರಜಾಪ್ರಭುತ್ವಕ್ಕೇ ಅವಮಾನ.

ಶ್ರೀ ಬಿ.ಎನ್. ಬಚ್ಚೇಗೌಡ : ರೈತರಿಗೆ we have transfered 82 paise, ಇದರಲ್ಲಿ ಅವಮಾನ ಏನು ಬಂತು ಹಾಲು ಉತ್ಪಾದಕರ ಕಷ್ಟಕ್ಕೆ ನಾವು ಕೊಟ್ಟಿರತಕ್ಕಂಥಾದ್ದು ಬಹಳ ಕಡಿಮೆ ಅಂದರೆ ಬರೀ 18 ಪೈಸೆಯಷ್ಟು ಮಾತ್ರ ಸಂಸ್ಕರಣೆ ವಿತರಣೆ ಮತ್ತು ಸಾಗಾಣಿಕೆಗಾಗಿ ಖರ್ಚು ಮಾಡಲು ತೆಗೆದುಕೊಳ್ಳಲಾಗಿದೆ. ಅದರಲ್ಲೂ ಕೆಲವು ಒಕ್ಕೂಟಗಳಿಗೆ ಇಡೀ ಒಂದು ರೂಪಾಯಿಯನ್ನು ಟ್ರಾನ್ಸ್‌ಫರ್ ಮಾಡಿದ್ದೇವೆ. ಶಿವಮೊಗ್ಗ ಮುಂತಾದ ಬೇರೆ ಬೇರೆ ಒಕ್ಕೂಟಗಳಿಗೆ entire rupee is transfered to the ryots.

ಶ್ರೀ ಜೆ.ಹೆಚ್ ಪಟೇಲ್ : ಪ್ರತಿಭಟನೆ ಮಾಡುವುದರ ಬಗ್ಗೆ .ಯಾರದೂ ಅಭ್ಯಂತರವಿಲ್ಲ, ಪ್ರತಿಭಟನೆ ಮಾಜುವುದೇ ಒಂದು ರಾಜಕೀಯ, ಅದು ತಮಗೂ ಗೊತ್ತಿದೆ ಪ್ರತಿಭಟನೆ ಮಾಡುವುದು ರಾಜಕೀಯ ಉದ್ದೇಶಕ್ಕಲ್ಲದೆ ಸಾಂಸ್ಕೃತಿಕ ಉದ್ದೇಶಕ್ಕೇ.

ಪಡಿತರ ಚೀಟಿಗಳ ವಿತರಣೆ

235 - ಶ್ರೀ ಕೆ.ಎಸ್. ನಾಗೇಗೌಡ (ಕಿರಿಗಾವಲು) ಶ್ರೀ ಜಿ.ವಿ. ರಾಮರೆಡ್ಡಿ (ಬಾಂಗೆಪಲ್ಲಿ) ಶ್ರೀ ಮುದ್ದಹನುಮೇಗೌಡ (ಕುಣಿಗಲ್) ಶ್ರೀ ಯು.ಬಿ. ಬಣಕಾರ್ (ಹಿರೇಕೇರೂರು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಸುವಿರೆ?

(ಅ) ಬಡವರಿಗಾಗಿ ಹಸಿರು, ಕೇಸರಿ ಪಡಿತರ ಚೀಟಿಗಳನ್ನು ಹಂಚುವ .ಯೋಜನೆ ರಾಜ್ಯದಲ್ಲಿ ಯಾವ ದಿನಾಂಕದಿಂದ ಜಾರಿಗೆ ಬಂದಿದೆ

(ಆ) ಈ ಯೋಜನೆಯಡಿಯಲ್ಲಿ ಗುರುತಿಸಲ್ಪಟ್ಟ ಒಟ್ಟು ಫಲಾನುಬವಿಗಳ ಸಂಖ್ಯೆ ಎಷ್ಟು ಜನರಿಗೆ ಪಡಿತರ ಚೀಟಿಗಳನ್ನು ಹಂಚಲಾಗಿದೆ,

(ಇ) ಇನ್ನೂ ಸಿಗಬೇಕಾಗಿರುವ ಫಲಾನುಭವಿಗಳಿಗೆ ಪಡಿತರ ಚೀಟಿಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು.

(ಈ) ಪಟ್ಟಣದಲ್ಲಿರುವ ಬಡವರಿ ಹಸಿರು ಪಡಿತರ ಚೀಟಿ ಹಂಚುವ ಯೋಜನೆ ಸರ್ಕಾರದವರ ಪರಿಶೀಲನೆಯಲ್ಲಿದೆಯೇ,

(ಉ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರಿ ಎಸ್. ನಂಜಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು):